**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 215/2021
ಪಿಡಬ್ಲು :7 ಸಿಡಬ್ಲು :5

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಯೋಗೆಶ ನಾಯ್ಡು |
| ಗಂಡನ ಹೆಸರು | : ಶ್ರೀ. ಮನೋಹರ |
| ವಯಸ್ಸು | : 33 ವರ್ಷ |
| ಉದ್ಯೋಗ | : ಖಾಸಗಿ ಕೆಲಸ |
| ವಾಸ್ತವ್ಯ | : ಶ್ಸಾಸ್ತ್ರಿ ನಗರ, ಬೆಳಗಾವಿ |
| ದಿನಾಂಕ | : 06-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಪರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

2021 ರಲ್ಲಿ ಪೋಲಿಸರು ಅಳವಣ ಗಲ್ಲಿಯಲ್ಲಿ ಪೋಲಿಸರು ನನ್ನ ಸಹಿ ಮಾಡಿಸಿಕೊಂಡಿದ್ದಾರೆ. ಅಳವಣ ಗಲ್ಲಿಯಲ್ಲಿರುವ ಪಂಡಿತ ನೆಹರು ಶಾಲೆಯ ಹತ್ತಿರ ರಸ್ತೆಯ ಮೇಲೆ ಪೋಲಿಸರು ಮತ್ತು ವಾಹನಗಳು ಇತ್ತು ನಾನು ಅಲ್ಲಿ ಹೋಗಿದ್ದೇನು ಅಲ್ಲಿ ಪೋಲಿಸರು ನನ್ನ ಸಹಿಯನ್ನು ಮಾಡಿಸಿಕೊಂಡಿದ್ದಾರೆ ಮತ್ತು ಪೋಟೊ ತೆಗೆದಿದ್ದಾರೆ.

ಸಾಕ್ಷಿ ಪಂಚನಾಮೆಯ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿ ನಿಪಿ-7[ಬಿ] ಎಂದು ಗುರುತಿಸಲಾಯಿತು.

2. ಪೋಲಿಸರು ನನ್ನನ್ನು ಕಟ್ಟಡದ 2ನೇ ಅಥವಾ 3ನೇ ಮಹಡಿಗೆ ಕರೆದುಕೊಂಡು ಹೋಗಿ ನನ್ನ ನಿಲ್ಲಿಸಿ ಫೊಟೊ ತೆಗೆದರು ಎಂದು ಹೇಳಿ ನಿಪಿ-4 ಪೋಟೊವನ್ನು ತೆಗೆದಿದ್ದಾರೆ. ಅದು ಯಾವ ಸ್ಥಳ ಮತ್ತು ಪೋಟೊವನ್ನು ಏಕೆ ತೆಗೆಯಲಾಗಿದೆ ಎಂದು ಹೇಳಿರುವುದಿಲ್ಲ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಈ ಸಾಕ್ಷಿಯು ಸಾಕ್ಷಿದಾರಾಗಿದ್ದು, ಸಾಕ್ಷಿ ಹೇಳಿಕೆಯನ್ನು ಪರಿಗಣಿಸಿದ್ದು ಸಾಕ್ಷಿಯು ವ್ಯತಿರಿಕ್ತವಾಗಿ ಹೇಳಿಕೆ ನೀಡಿದ್ದರಿಂದ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದ**

2. ನಿಪಿ-8 ಪೋಲಿಸ ನೋಟಿಸಿನ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-8 [ಬಿ] ಎಂದು ಗುರುತಿಸಲಾಯಿತು. ನಿಪಿ-9 ಒಪ್ಪಿಗೆ ಪತ್ರದ ಮೇಲೆ ಸಾಕ್ಷಿ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ-2 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-9 [ಬಿ] ಎಂದು ಗುರುತಿಸಲಾಯಿತು.

3. ದಿನಾಂಕಃ 03-07-2021 ರಂದು ಪೋಲಿಸರು ನನಗೆ ನೋಟಿಸ ನೀಡಿದ್ದರು ಎನ್ನುವುದಕ್ಕೆ ಸಾಕ್ಷಿ ನಾನು ಸಹಿ ಮಾತ್ರ ಮಾಡಿದ್ದೇನೆ ಎಂದು ಹೇಳುತ್ತಾರೆ. ನಿಪಿ-9 ಒಪ್ಪಿಗೆ ಪತ್ರದ ಪ್ರಕಾರ ಪೋಲಿಸರು ನನ್ನನ್ನು ಮಾರುತಿ ಗೊರಂಗ ಅವರ 3 ನೇ ಮಹಡಿಗೆ ಕರೆದುಕೊಂಡು ಹೋಗಿದ್ದರು, ಮೃತಳ ತಾಯಿ ಹಾಜರಿದ್ದು ಸ್ಥಳ ತೋರಿಸಿ ನನ್ನ ಮಗಳ

ಕೊಲೆ ಆದ ಸ್ಥಳ ಎಂದು ಪೋಲಿಸರಿಗೆ ತೋರಿಸಿದರು ಎಂದು, ಪೋಲಿಸರು ನನಗೆ ವಿಷಯ ತಿಳಿಸಿ ನಿಪಿ–7 ಪಂಚನಾಮೆ ಮಾಡಿದರು ಎನ್ನುವುದಕ್ಕೆ ಸಾಕ್ಷಿ ನನಗೆ ವಿಚಾರ ಗೊತ್ತಿರುವುದಿಲ್ಲ ಪೋಲಿಸರು ಬರೆದುಕೊಂಡು ನನ್ನ ಸಹಿ ಮಾಡಿಸಿಕೊಂಡು ಎಂದು ಹೇಳಿದ್ದಾರೆ. ನಿಪಿ –4 ಪೋಟೊವನ್ನು ತೆಗೆಯಲಾಯಿತು ಎನ್ನುವುದು ಸರಿ. ನಿಪಿ–7 ಪಂಚನಾಮೆಯಲ್ಲಿರುವ ವಿಚಾರ ನನಗೆ ಗೊತ್ತಿದ್ದು ನಾನು ತಿಳಿದುಕೊಂಡು ಸಹಿ ಮಾಡಿದ್ದರು ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿತನ ಪರ ಶ್ರೀ.ಎಸ್.ಜಿ.ಜೆ ವಕೀಲರಿಂದ**

4. ನಿಪಿ–7 ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ಸರಿ. ಪೋಲಿಸರು ನನ್ನ ಮುಂದೆ ಏನು ಬರೆದಿರುವುದಿಲ್ಲ. ನಾನು ಸಹಿ ಮಾತ್ರ ಮಾಡಿದ್ದೇನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.